## ಮಕ್ಕಳ ಭಾಷಾ ಕಲಿಕೆಗೆ ಸಂವಹನ

ಚಿಕ್ಕವಯಸ್ಸಿನ ಮಕ್ಕಳ ಜೊತೆ ದೊಡ್ಡವರು ಮಾತುಕತೆ ಮಾಡುವುದರಿಂದ ಮಕ್ಕಳ ಭಾಷಾ ಕೌಶಲ್ಯ ವೃದ್ಧಿಯಾಗುತ್ತದೆ ಎಂದು ಬೋಸ್ಟನ್ ಸಂಶೋಧಕರ ಅಧ್ಯಯನ ಹೇಳಿದೆ.

ಮಕ್ಕಳ ಜೊತೆ ಬೇಗ ಸಂವಹನವನ್ನು ಆರಂಭಿಸಿದರೆ ಅವರ ಮೆದುಳಿನಲ್ಲಿ ಭಾಷೆಯನ್ನು ಗ್ರಹಿಸುವ ಭಾಗ ಚೆನ್ನಾಗಿ ಬೆಳೆಯುತ್ತದೆ. ಶಬ್ದವನ್ನು ಗ್ರಹಿಸುವ ಸಾಮರ್ಥ್ಯ ಅವರಲ್ಲಿ ಹೆಚ್ಚುವ ಜೊತೆಗೆ ಬೇಗ ಹೊಸ ಹೊಸ ಶಬ್ದಗಳನ್ನು ಕಲಿಯುತ್ತಾರೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಸಂಶೋಧಕರು ಬೇರೆ ಬೇರೆ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯಿರುವ 4ರಿಂದ 6 ವರ್ಷದ 40 ಮಕ್ಕಳನ್ನು ಆಯ್ದು ತಮ್ಮ ಅಧ್ಯಯನವನ್ನು ಕೈಗೊಂಡಿದ್ದರು.

## ಅಂತರ್ಜಲ ಮಾಲಿನ್ಯ ಪರೀಕ್ಷೆಗೆ ಸಾಧನ

ಅಂತರ್ಜಲವೂ ಶುದ್ಧವಾಗಿ ಉಳಿದಿಲ್ಲ. ಅದೂ ಮಲಿನವಾಗಿ ಕುಡಿಯಲು ಯೋಗ್ಯವಾಗಿಲ್ಲ. ಹಾಗಾದರೆ ಅದನ್ನು ಗುರುತಿಸುವುದಾದರೂ ಹೇಗೆ? ಅದರ ಪತ್ತೆಗೆ ಚಿಕ್ಕ ಸಾಧನವನ್ನು ಅಮೆರಿಕದ ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

ಕಡಿಮೆ ವೆಚ್ಚದಲ್ಲಿ ಅಂತರ್ಜಲದ ಮಾಲಿನ್ಯ ಪ್ರಮಾಣವನ್ನು ಅಳೆಯುವುದರಿಂದ ಆ ನೀರಿನ ಕುಡಿಯುವ ಯೋಗ್ಯತೆಯನ್ನು ಅರಿಯಬಹುದು ಎಂದು ಲಾರೆನ್ಸ್ ರಾಷ್ಟ್ರೀಯ ಪ್ರಯೋಗಾಲಯದ ಸಂಶೋಧಕರು ಹೇಳುತ್ತಾರೆ.

ಪರಿಸರ ಮಾಲಿನ್ಯದ ತೀವ್ರ ಪ್ರಮಾಣದ ಹೆಚ್ಚಳದಿಂದ ಅಂತರ್ಜಲವೂ ಕಲುಷಿತಗೊಂಡಿದೆ. ಅಂತರ್ಜಲ ಕುಡಿಯಲು ಬಳಸಬೇಕು ಎಂದರೆ ಆಗಾಗ ಅದನ್ನು ಪರೀಕ್ಷಿಸಬೇಕು. ಇಲ್ಲದಿದ್ದರೆ ಮುಂದೆ ಆರೋಗ್ಯ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ನೀರನ್ನು ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗುವ ಬದಲು ಮನೆಯಲ್ಲೇ ಪರೀಕ್ಷಿಸಬಹುದೆಂದು ಅವರು ಹೇಳಿದ್ದಾರೆ.

## ಜೀವಕಂಟಕ ಪರೋಕ್ಷ ಧೂಮ

ಯಾವ ಮಗು ತನ್ನ ಬಾಲ್ಯವನ್ನು ಧೂಮಪಾನಿಗಳ ವಾತಾವರಣದಲ್ಲಿ ಕಳೆಯುತ್ತದೆಯೋ ಅದು ದೊಡ್ಡದಾದ ಮೇಲೆ ಶ್ವಾಸಕೋಶ ಸಂಬಂಧಿ ಕಾಯಿಲೆಯಿಂದ ಬಳಲುವ ಸಾಧ್ಯತೆ ಹೆಚ್ಚಾಗುತ್ತದೆ ಎಂದು ಅಮೆರಿಕದ ಕ್ಯಾನ್ಸರ್ ಸಂಸ್ಥೆಯ ಸಂಶೋಧಕರು ಹೇಳಿದ್ದಾರೆ.

ಧೂಮಪಾನ ಮಾಡದ ಎಪ್ಪತ್ತು ಸಾವಿರ ವಯಸ್ಕರನ್ನು ಸಂಶೋಧಕರು 22 ವರ್ಷಗಳ ಕಾಲ ಅಧ್ಯಯನಕ್ಕೆ ಒಳಪಡಿಸಿದ್ದರು. ಅವರು ಧೂಮಪಾನ ಮಾಡದಿದ್ದರೂ ಅವರ ಬಾಲ್ಯದಲ್ಲಿ ಮನೆಯಲ್ಲೇ ಧೂಮಪಾನಿಗಳಿದ್ದರು. ಅಂತಹವರಲ್ಲಿ ಶೇ.31ರಷ್ಟು ಮಂದಿಗೆ ಶ್ವಾಸಕೋಶ ಸಂಬಂಧಿ ತೊಂದರೆಗಳು ಇರುವುದು ಖಚಿತವಾಗಿತ್ತು ಎಂದು ಸಂಶೋಧಕರು ಹೇಳಿದ್ದಾರೆ.

ಮಗು ಪರೋಕ್ಷ ಧೂಮಪಾನ ಮಾಡುವುದರಿಂದ ಅಸ್ತಮಾ ಕೂಡ ಬರಬಹುದು. ಸಿಗರೇಟ್ ಸುಡುವಾಗ ಹೊರ ಸೂಸುವ ಹೊಗೆ, ಧೂಮಪಾನಿ ದಮ್ ಎಳೆದು ಹೊರ ಬಿಡುವ ಹೊಗೆ ಎರಡೂ ಅಪಾಯಕಾರಿ. ಬಾಲ್ಯದಲ್ಲಿ ಮಗುವೊಂದು ಧೂಮದ ವಾತಾವರಣದಲ್ಲಿ ಬೆಳೆದಿದ್ದರೆ ಅದು ತನ್ನ ಯೌವನ ಇಲ್ಲವೆ ಇಳಿ ವಯಸ್ಸಿನಲ್ಲಿ ಅದರ ಅಪಾಯವನ್ನು ಎದುರಿಸಬೇಕಾಗುತ್ತದೆ ಎಂದೂ ಸಂಶೋಧಕರು ಎಚ್ಚರಿಸಿದ್ದಾರೆ.

–ಟಿಪ್ಸ್



I Manufacturer: **ASUM**, Pune. **020-65001785 I** Customer Care: Rahul: **94816 00865**, Datta: **0 91300 26068 I asumkj@gmail.com I www.asum.com I**
**Distributor: Yellapur:** Shri Rama Stores: **08419-262180 I Bangalore:** Mohan Pharma: **080-22874575 I Mangalore:** Vivek Traders: **0824-2496963 I Bellary:** Kalwa Agencies: **9379999406 I Belgaum:** Satyam Ayurvedic & Gen. Distributor: **0831-4206784**